**CC 10005/2024**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 10005/2024

**ಸಿ ಡಬ್ಲೂ -**
**ಪಿ ಡಬ್ಲೂ -**

**ಸಾಕ್ಷಿಯ ಹೆಸರು -** **ಬಿ ಹಿಮಾಲಯಾ**
**ಗಂಡನ ಹೆಸರು -** **ವಿಶ್ವನಾಥ**
**ವಯಸ್ಸು -** 71 **ವರ್ಷಗಳು**
**ಉದ್ಯೋಗ -** **ಗೃಹಿಣಿ**
**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 05-02-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುತ್ತದೆ.

ಆರೋಪಿ ನಮ್ಮ ಮನೆಯಲ್ಲಿ ಮನೆ ಕೆಲಸ **6-7** ವರ್ಷಗಳಿಂದ ಮಾಡುತ್ತಿದ್ದಳು. ನಮ್ಮ ಮನೆಯಲ್ಲಿ ಕಳ್ಳತನವೊಂದು ಆಗಿದ್ದರಿಂದ ಪೋಲಿಸರಿಗೆ ದೂರೊಂದನ್ನು ನೀಡಿದ್ದೆ. ಆ ರೀತಿ ಮನೆಯಲ್ಲಿದ್ದ ಮಾಂಗಲ್ಯ ಸರ, **4** ಬಂಗಾರದ ಬಳೆಗಳು ಒಟ್ಟು **110** ಗ್ರಾಂ ತೂಕದ ಬೆಲೆ ಬಾಳುವ ಒಡವೆಗಳು ಕಳ್ಳತನ ಆಗಿದ್ದವು. ದೂರನ್ನು ದಿಃ **20-09-2024** ರಂದು ನೀಡಿರುತೆತೇನೆ. ದೂರು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ದೂರು ಅದೇ ಆಗಿರುತ್ತದೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ನಿಪಿಃ **1** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **1**(ಎ) ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ನಂತರ ಪೋಲಿಸರು ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿದ್ದರು. ಪಂಚಾನಾವೆ ನೋಡಿ ಗುರಿಸುತೆತೇನೆ. ಸಾಕ್ಷಿ

ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **2**(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ನಕಾಶೆಗೆ ಸಹಿ ಮಾಡಿದ್ದೆ. ಸಾಕ್ಷಿ ನಕಾಶೆ ನೋಡಿ ಗುರುತಿಸಿದ್ದು, ನಿಪಿಃ **3** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **3**(ಎ) ಎಂದು ಗುರುತಿಸಲಾಯಿತು. ನಿಪಿಃ **2** ರಲ್ಲಿ ಏನೂ ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ಪೋಟೋಗಳಲ್ಲಿ ವ್ಯಕ್ತಿ ನಾನೇ ಇರುತ್ತೇನೆ ಸಾಕ್ಷಿ ಪೋಟೋ ನೋಡಿ ಗುರುತಿಸಿದ್ದು, ನಿಪಿಃ **4** ಎಂದು ಗುರುತಿಸಲಾಯಿತು.

ಯಾರೂ ಕಳ್ಳತನ ಮಾಡಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಪೋಲಿಸರು ಕಳ್ಳತನ ಆಗಿದ್ದ ಆಭರಣಗಳನ್ನು ನನಗೆ ಹಿಂತಿರುಗಿಸಿರುತ್ತಾರೆ, ಅವುಗಳಿಂದ ಯಾರಿಂದ ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರಿಂದ ಆಭರಣಗಳನ್ನು ಹಿಂಪಡೆದಾಗ ಒಂದು ಭದ್ರತಾ ಪ್ರಮಾಣ ಪತ್ರ ಬರೆದುಕೊಟ್ಟಿರುತ್ತೇನೆ. ಸಾಕ್ಷಿ ಪ್ರಮಾಳ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **5** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **5**(ಎ) ಎಂದು ಗುರುತಿಸಲಾಯಿತು.

ಸಾಕ್ಷಿ **4** ಪೋಟೋ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿಃ **6** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ</u>**

ದಿಃ 20-09-2024 ರಂದು ನಾನು ವಾಕಿಂಗ್ ನಿಂದ ಮರಳಿ, ದೇವರ ಕಟ್ಟೆಯ ಕೆಳಗಡೆ ಇಟ್ಟಿದ್ದ ಒಡವೆಗಳನ್ನು ನೋಡಿದಾಗ ಅವು ಇರಲಿಲ್ಲ ಅಂದರೆ ಸರಿ. ಆಗ ನಾವು ಆರೋಪಿಯ ಮಗ ಹುಲುಗಪ್ಪನನ್ನು ಕರೆದು ವಿಚಾಸಿದ್ದೇವು ಅಂದರೆ ಸರಿಯಲ್ಲ. ಆರೋಪಿ ಬೇರೆ ಕಡೆ ಕೆಲಸಕ್ಕೆ ಹೋಗಿರುತ್ತಾಳೆ, ಸಂಜೆ ಬರುತ್ತಾಳೆ ಎಂದು ಆಕೆಯ ಮಗ ತಿಳಿಸಿದ್ದ ಅಂದರೆ ಸರಿಯಲ್ಲ. ಆಗಲೇ ಆರೋಪಿ ಕಳ್ಳತನ ಮಾಡಿದ ಬಗ್ಗೆ ಖಚಿತಪಡಿಸಿಕೊಂಡಿದ್ದೇವು ಅಂದರೆ ಸರಿಯಲ್ಲ. ಆದ್ದರಿಂದಲೇ ನಿಪಿಃ 1 ಅನ್ನು ಆರೋಪಿಯ ಮೇಲಿನ ಸಂಶಯದಿಂದ ನೀಡಿದ್ದೇವು ಅಂದರೆ ಸರಿಯಲ್ಲ.

ದಿಃ 06-10-2024 ರಂದು ರಾತ್ರಿ 8-00 ಗಂಟೆಗೆ ಪ್ರಕರಣದ ತನಿಖಾಧಿಕಾರಿ ಆರೋಪಿಯಿಂದ ಆಭರಣಗಳನ್ನು ಜಪ್ತು ಪಡಿಸಿಕೊಂಡಿದ್ದ ಬಗ್ಗೆ ತಿಳಿಸಿದ್ದರು ಅಂದರೆ ಸರಿಯಲ್ಲ. ನಾನು ಆಭರಣಗಳನ್ನು ಆಗಲೇ ಗುರುತಿಸಿದ್ದೆ ಅಂದರೆ ಸರಿಯಲ್ಲ. ಆಭರಣಗಳನ್ನು ಬಿಡಿಸಿಕೊಂಡಾಗ ಈ ಬಗ್ಗೆ ದಿಃ 12-11-2024 ರಂದು ಆರೋಪಿಯ ವಿರುದ್ದ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆಯ ಭಾಗವನ್ನು ನಿಪಿಃ 7 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿದ್ದರು ಅಂದರೆ ಸರಿಯಲ್ಲ. ನಿಪಿಃ 1 ರಲ್ಲಿ ಸಂಶಯ ವ್ಯಕ್ತಪಡಿಸಿ ನಂತರ ನಿಪಿಃ 7 ರಲ್ಲಿ ಆ ಬಗ್ಗೆ ಖಾತ್ರಿ ಪಡಿಸಿ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಆರೋಪಿ ನಮ್ಮ ಮನೆಯಲ್ಲಿ ಕೆಲಸ ಮಾಡಿದ್ದರಿಂದ ಆಕೆಯ ಮೇಲಿನ

ಅನುಕಂಪದಿಂದ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ. ಹೆ. ಕೇ. ಸರಿ ಇದೆ

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.